## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.

### ವೈದ್ಯಕೀಯ ನೆರವು ವೇದಿಕೆ

### ಪ್ರಕಟಣೆ

### ಆರೋಗ್ಯ ಮಾಹಿತಿ ಬೇಕೆ? ಶ್ರೀ ಶಾರದಾ ಪತ್ರಿಕೆಗೆ ಬರೆಯಿರಿ!

ಆರೋಗ್ಯ ಮಾಹಿತಿ ಬಗ್ಗೆ ಸಮಸ್ಯೆಗಳೇನಾದರೂ ಇದ್ದರೆ ಪ್ರಶ್ನೆಗಳ ಮೂಲಕ ವಿವರಗಳನ್ನು ಬರೆದು ಕಳುಹಿಸಿದಲ್ಲಿ ಬೇರೆ ಬೇರೆ ವೈದ್ಯಕೀಯ ವಿಭಾಗಗಳಿಗೆ ಸಂಬಂಧಪಟ್ಟ ತಜ್ಞ ವೈದ್ಯರಿಂದ ಚರ್ಚಿಸಿ ಉತ್ತರಗಳನ್ನು ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಊರು, ಹೆಸರು ಪ್ರಕಟಿಸುವ ಅಗತ್ಯವಿಲ್ಲದಿದ್ದರೆ ಹಾಗೆಯೇ ಪ್ರಕಟಿಸಲಾಗುವುದು. ಆಸಕ್ತರು ಪ್ರಶ್ನೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ವೈದ್ಯಕೀಯ ನೆರವು ವೇದಿಕೆಯ ಪ್ರಕಟಣೆಯು ತಿಳಿಸಿದೆ.

**- ಅಧ್ಯಕ್ಷರು, ವೈದ್ಯಕೀಯ ನೆರವು ವೇದಿಕೆ**

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

## ಶಿಕ್ಷಣ ಮತ್ತು ತರಬೇತಿ ವೇದಿಕೆ

ಶ್ರೀ ಶಾರದಾ ಮಂಟಪ, ಉಡುಪಿ

### ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಈ ತರಬೇತಿ ಶಿಬಿರವನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು.

ಪ್ರಥಮ ಹಂತದ ಶಿಬಿರವು ದಿನಾಂಕ 26-10-2008 ರವಿವಾರ ಸಮಯ ಬೆಳಿಗ್ಗೆ 9-30 ರಿಂದ ಸಾಯಂಕಾಲ 4-30ರ ವರೆಗೆ ನಡೆಯುವುದು.

ಪ್ರಥಮ ಹಂತದ ಶಿಬಿರದಲ್ಲಿ ಎಲ್ಲಾ ವಿಷಯಗಳ ನೀಲ ನಕಾಶೆ, ಹಿಂದಿನ ಪಬ್ಲಿಕ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ, ಚರ್ಚೆ ಹಾಗೂ ಪರಿಕ್ಷಾ ಸಿದ್ಧತೆಯ ಕುರಿತು ತಜ್ಞರಿಂದ ಸೂಕ್ತ ಮಾಹಿತಿ ನೀಡಲಾಗುವುದು.

**ವಿ.ಸೂ. :** 1) ಪರೀಕ್ಷಾ ಸಿದ್ಧತೆಯ ವಿಷಯದ ಕುರಿತು ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ ಅವರು ಮಾಹಿತಿ ನೀಡಲಿದ್ದಾರೆ.

2) ಎರಡನೇ ಹಂತದ ಶಿಬಿರದ ವಿವರಗಳನ್ನು ಮುಂದೆ ತಿಳಿಸಲಾಗುವುದು.

3) ಈ ತರಬೇತಿ ಕಾರ್ಯಕ್ರಮದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ವಿದ್ಯಾರ್ಥಿಗಳು ವೇದಿಕೆಯು ನಡೆಸುವ ಈ ಎರಡು ಹಂತಗಳ ಶಿಬಿರಗಳಲ್ಲಿ ಭಾಗವಹಿಸುವುದು ಅಗತ್ಯ.

4) ಭಾಗವಹಿಸಲಿಚ್ಛಿಸುವ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಇವರಲ್ಲಿ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ. (ಮೊಬೈಲ್ ಸಂಖ್ಯೆ 94492 54846)

**- ಅಧ್ಯಕ್ಷರು ಮತ್ತು ಸದಸ್ಯರು, ಶಿಕ್ಷಣ ಮತ್ತು ತರಬೇತಿ ವೇದಿಕೆ**

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ, ಸುಳ್ಯ-ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ, (ರಿ), ಸುಳ್ಯ, ಇದರ ಮಹಾಸಭೆಯು ದಿನಾಂಕ 31-05-2008 ರಂದು ನಡೆದು ಈ ಕೆಳಗಿನ ಪದಾಧಿಕಾರಿಗಳು ಮುಂದಿನ 3 ವರ್ಷಕ್ಕೆ ಆಯ್ಕೆಗೊಂಡರು.

ಅಧ್ಯಕ್ಷರು - ಡಾ। ಸದಾಶಿವ ರಾವ್; ಕಾರ್ಯದರ್ಶಿ-ಶ್ರೀ ಗಿರಿಜಾಶಂಕರ್ ಟಿ.; ಕೋಶಾಧಿಕಾರಿ-ಶ್ರೀ ಪಿ. ಭಾಸ್ಕರ ರಾವ್; ಉಪಾಧ್ಯಕ್ಷರು-ಶ್ರೀ ವಿಠಲ ರಾವ್; ಉಪಕಾರ್ಯದರ್ಶಿ : ಶ್ರೀ ಕೃಷ್ಣ ರಾವ್.

ಸ್ಥಾನಿಕ ಸಂಪದ ಪತ್ರಿಕೆಯ ಸಂಪಾದಕರು - ಶ್ರೀ ಪಾಲಚಂದ್ರ ರಾವ್ ವೈ. ವಿ.

ಕಾರ್ಯಾಲಯ : ಜ್ಯೋತಿ ಆಸ್ಪತ್ರೆ, ಜ್ಯೋತಿ ವೃತ್ತದ ಬಳಿ, ಮುಖ್ಯ ರಸ್ತೆ, ಸುಳ್ಯ, ದ.ಕ. - 574 239

## ಕೋಟೆಕಾರಿನಲ್ಲಿ ನವರಾತ್ರಿ ಉತ್ಸವ

ಮಂಗಳೂರು ಕೋಟೆಕಾರಿನ ಶ್ರೀ ಶೃಂಗೇರಿ ಶಾರದಾ ಪೀಠದಲ್ಲಿ ತಾ.30-09-2008ರಿಂದ ತಾ.09-10-2008ರ ವರೆಗೆ ಶರನ್ನವರಾತ್ರಿ ಉತ್ಸವವು ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು.

ಪ್ರತಿದಿನ ಮಧ್ಯಾಹ್ನ ಹಾಗೂ ರಾತ್ರಿ ವಿಶೇಷ ಪೂಜೆ, ಸಾಯಂಕಾಲ 4-30ರಿಂದ ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ನೆರವೇರಿತು. ತಾ.06-10-2008ರಂದು ಸಂಜೆ ಗಂಟೆ 5-00ಕ್ಕೆ ದಸರಾ ನಾಡಹಬ್ಬಗಳ ಉದ್ಘಾಟನೆಯು ಸೋಮೇಶ್ವರ ಆನಂದ ಆಶ್ರಮದ ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಟಿ.ಕೆ. ಸರೋಜ ಕುಮಾರಿಯವರಿಂದ ನೆರವೇರಿತು. ತಾ.08-10-2008ರಂದು ಮಧ್ಯಾಹ್ನ 12-00ಗಂಟೆಗೆ ಸರಿಯಾಗಿ ಶ್ರೀ ಚಂಡಿಕಾ ಯಾಗದ ಪೂರ್ಣಾಹುತಿ ನೆರವೇರಿತು.

ಅಲ್ಲದೆ ಸಂಜೆ ಪ್ರತಿದಿನ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ಚಿನ್ಮಯ ಮಿಷನ್, ಮಂಗಳೂರು

### ಪೂಜ್ಯ ಸ್ವಾಮಿ ಬ್ರಹ್ಮಾನಂದ ಸರಸ್ವತಿಯವರ ಪ್ರವಚನ

ಚಿನ್ಮಯ ಮಿಷನ್, ಮಂಗಳೂರು ಕಳೆದ 2 ವರ್ಷಗಳಂತೆ, ಈ ಸಲವೂ ಪೂಜ್ಯ ಸ್ವಾಮಿ ಬ್ರಹ್ಮಾನಂದ ಸರಸ್ವತಿಯವರ "ಗೀತಾಜ್ಞಾನ ಯಜ್ಞ"ವನ್ನು ಟಿ.ವಿ.ರಮಣ ಪೈ. ಕನ್ವೆಂಷನ್ ಸೆಂಟರ್‌ನಲ್ಲಿ ಆಯೋಜಿಸಿದೆ. ಅಕ್ಟೋಬರ್ 21ರಿಂದ 25ರ ತನಕ ಸಂಜೆ 6-30ರಿಂದ 8-00ರ ತನಕ ನಡೆಯಲಿದೆ. ಐದು ದಿನಗಳ ಕಾಲ ನಡೆಯುವ ಈ ಪ್ರವಚನವು, ಭಗವದ್ಗೀತೆಯ 13ನೇ ಅಧ್ಯಾಯವಾದ "ಕ್ಷೇತ್ರಕ್ಷೇತ್ರಜ್ಞ ವಿಭಾಗ ಯೋಗ" ನಾಮದ ವಿಷಯವನ್ನು ಆಧಾರವಾಗಿಟ್ಟುಕೊಂಡಿದೆ. ಜೀವ, ಜಗತ್ತು ಮತ್ತು ಈಶ್ವರ ಎಂಬೀ ತ್ರಿಪುಟಿಗಳ ಬಗ್ಗೆ ಪರಮಾತ್ಮನು ನೀಡಿದ ವಿವರಣೆಯನ್ನು ತಮ್ಮದೇ ಆದ ಸುಲಭ, ಸ್ಪಷ್ಟ, ಸುಮಧುರ, ಮನಮುಟ್ಟುವ ರೀತಿಯ ಶೈಲಿಯಲ್ಲಿ ಶ್ರೋತೃಗಳಿಗೆ ತಲಪಿಸಲಿದ್ದಾರೆ. ಭಕ್ತವೃಂದವು ಹೆಚ್ಚಿನ ಸಂಖ್ಯೆಯಲ್ಲಿ ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**1-11-2008ನೇ ಶನಿವಾರ ದೀಪಾವಳಿ ಆಚರಣೆ ಶ್ರೀ ಸುಬ್ರಹ್ಮಣ್ಯ ಸಭೆಯಲ್ಲಿ ಸಂಜೆ 5-30ಕ್ಕೆ ನಡೆಯಲಿದೆ. ಪರಂಪರಾಗತ (Traditional) ಗೂಡುದೀಪ ಸ್ಪರ್ಧೆ ಅಂದು ಜರಗಲಿದೆ.**

**- ಅಧ್ಯಕ್ಷರು ಮತ್ತು ಆಡಳಿತ ಮಂಡಳಿ, ಶ್ರೀ ಸುಬ್ರಹ್ಮಣ್ಯ ಸಭೆ, ಮಂಗಳೂರು.**

## ಶ್ರೀ ಸುಬ್ರಹ್ಮಣ್ಯ ಸಭಾ ಚ್ಯಾರಿಟೇಬಲ್ ಟ್ರಸ್ಟ್ (ರಿ.),

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಕೊಡಿಯಾಲ್‌ಬೈಲ್, ಮಂಗಳೂರು - 575 003.
ಫೋನ್ : 0824-2493978

### ಪ್ರಕಟಣೆ

2008-09ನೇ ಸಾಲಿಗೆ ಪಿ.ಯು.ಸಿ. ಯಿಂದ ಮೇಲ್ಪಟ್ಟ ತರಗತಿಗಳಲ್ಲಿ ಕಲಿಯುವ ಸಮಾಜದ ಬಡ ಕುಟುಂಬಗಳಿಂದ ಬರುವ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲು ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು 30-10-2008ರ ಒಳಗೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಬೇಕಾಗಿ ಕೋರಲಾಗಿದೆ.

**ಅರ್ಜಿ ಫಾರಂಗಳು ದೊರೆಯುವ ಸ್ಥಳ**

1. ಶ್ರೀ ಉಮೇಶ ಶ್ಯಾನುಭೋಗ್, ಮೂಕಾಂಬಿಕಾ ಇಂಡಸ್ಟ್ರೀಸ್, ಕಿರಿ ಮಂಜೇಶ್ವರ
2. ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ
3. ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ, ಕರಂಗಲ್ಪಾಡಿ, ಮಂಗಳೂರು
4. ಪ್ರಮೋದ್ ಆಟೋಮೊಬೈಲ್, ಮಂಗಳೂರು
5. ವಿಶ್ರಾಮ್ ಮೋಟರ್ಸ್, ಕೊಡಿಯಾಲ್‌ಬೈಲ್, ಮಂಗಳೂರು
6. ಬಿ. ಎಸ್. ಸುರೇಶ್, ಪಂಚವಟಿ, ಉಜಿರೆ
7. ಎನ್. ಎಸ್. ನಟರಾಜ, ಪೋಸ್ಟ್ ಆಫೀಸ್‌ನ ಹತ್ತಿರ ಪುತ್ತೂರು
8. ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು
9. ಶ್ರೀ ಬಿ. ಭಾಸ್ಕರ ರಾವ್, ಸುಳ್ಯ
10. ಶ್ರೀ ಕೆ.ವಿ. ಶ್ಯಾನುಭೋಗ್, ಎಡ್ವೊಕೇಟ್, ಬ್ಯಾಂಕ್ ರಸ್ತೆ, ಕಾಸರಗೋಡು
11. ಶ್ರೀ ಶರತ್ ಕುಮಾರ್, ಅಧ್ಯಕ್ಷರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು
12. ಶ್ರೀ ಗೋಪಾಲಕೃಷ್ಣ ಕೋಲ್ಪೆ , ಕಡಬ

**- ಕಾರ್ಯದರ್ಶಿ, ಕರುಣ್ ರಾವ್, ಬೆಳ್ಳೆ, ಮೊಬೈಲ್ : 92433 09120**

## ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ-ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ (ರಿ.), ಮಂಗಳೂರು ಇದರ 71ನೇ ವಾರ್ಷಿಕ ಮಹಾಸಭೆಯು ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಭಾಭವನ, ಬಿಜೈರಸ್ತೆ, ಮಂಗಳೂರು ಇಲ್ಲಿ ತಾ.21-9-2008ರಂದು ಸಂಘದ ಅಧ್ಯಕ್ಷ ಶ್ರೀ ಪಿ. ರಾಜಗೋಪಾಲ ರಾವ್, ಚಾರ್ಟರ್ಡ್ ಅಕೌಂಟೆಂಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

2007-08ನೇ ವರ್ಷದ ಸಾಲಿನ, ಆಡಳಿತ ಮಂಡಳಿಯ ವರದಿಯನ್ನು ಮಂಡಿಸಿದ ಅಧ್ಯಕ್ಷರು, ಸಂಘದ ಪ್ರಗತಿಗಾಗಿ ಎಲ್ಲರೂ ಸಹಕರಿಸಬೇಕೆಂದು ಸದಸ್ಯರಲ್ಲಿ ವಿನಂತಿಸಿದರು. ಸಂಘದ ಕಾರ್ಯದರ್ಶಿ ಶ್ರೀಮತಿ ಮಮತಾ ಆರ್.ರಾವ್‌ರವರು ಸಂಘದ ಗತವರ್ಷದ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಿದರು. ಸಂಘದ ನಿರ್ದೇಶಕ ಶ್ರೀ ಕೆ. ಪ್ರದೀಪ್ ರಾವ್‌ರವರು 2008-09ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು. ಸಂಘದ ಉಪನಿಬಂಧನೆಗಳ ತಿದ್ದುಪಡಿಯ ಬಗ್ಗೆ ಸಂಘದ ನಿರ್ದೇಶಕರಾದ ಶ್ರೀ ಬಿ. ಎಸ್. ಅನಿಲ್ ರಾವ್‌ರವರು ಸಭೆಗೆ ಮಾಹಿತಿ ನೀಡಿದರು. ಸಂಘವು ಪ್ರಸ್ತಾವಿಸಿದ ಶೇ.10ರ ಲಾಭಾಂಶ ವಿತರಣೆ ಹಾಗೂ ಪುತ್ತೂರು ಮತ್ತು ಬೆಳ್ತಂಗಡಿಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸುವ ಬಗ್ಗೆ ಮಹಾಸಭೆಯು ತನ್ನ ಒಪ್ಪಿಗೆಯನ್ನು ಸೂಚಿಸಿತು.

ಶ್ರೀಮತಿ ಸುಮನಾಕೃಷ್ಣರವರ ಪ್ರಾರ್ಥನೆಯೊಂದಿಗೆ ಮಹಾಸಭೆಯು ಆರಂಭಗೊಂಡಿತು. ಸಂಘದ ನಿರ್ದೇಶಕ ಶ್ರೀ ಪ್ರವೀಣ್‌ಕುಮಾರ್ ಆದ್ಯಪಾಡಿ, ಸದಸ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ಶ್ರೀಮತಿ ಮಮತಾ ಆರ್.ರಾವ್‌ರವರು ಧನ್ಯವಾದ ಸಮರ್ಪಿಸಿದರು.

ಮಹಾಸಭೆಯ ಆರಂಭಕ್ಕೆ ಮೊದಲು ಸಂಘದ ವತಿಯಿಂದ ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿತ್ತು.